# ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮಹಿಳಾ ಚಿಂತನೆಗಳು

**ಮಹಾಂತೇಶ ಸೀತಾರಾಮ ಕಾಂಬಳೆ***

**DOI: https://doi.org/10.5281/zenodo.19637977**

**ABSTRACT**

ಭಾರತೀಯ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ದ್ವಿತೀಯ ದರ್ಜೆಯ ಪ್ರಜೆಗಳಾಗಿ, ಧಾರ್ಮಿಕ ಕಟ್ಟುಪಾಡುಗಳಿಂದ ಶೋಷಣೆಗೆ ಒಳಗಾಗಿದ್ದ ಮಹಿಳೆಯರ ವಿಮೋಚನೆಗಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರು ರೂಪಿಸಿದ ತಾತ್ವಿಕ ಮತ್ತು ಕಾನೂನಾತ್ಮಕ ನೆಲೆಗಟ್ಟುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ದಲಿತ ಮತ್ತು ಹಿಂದುಳಿದ ವರ್ಗಗಳ ವಿಮೋಚನೆಯ ಜೊತೆಗೆ, ಸಮಸ್ತ ಮಹಿಳಾ ಸಮುದಾಯದ ಶಿಕ್ಷಣ, ಸಮಾನತೆ ಮತ್ತು ಸ್ವಾಭಿಮಾನದ ಬದುಕಿಗಾಗಿ ಅವರು ನಡೆಸಿದ ಮಹಾಡ್ ಸತ್ಯಾಗ್ರಹ ಹಾಗೂ ದೇವದಾಸಿ ಪದ್ಧತಿ ವಿರೋಧಿ ಹೋರಾಟಗಳ ಮಹತ್ವವನ್ನು ಗುರುತಿಸಲಾಗಿದೆ. ಮಾತೃತ್ವ ರಜೆ, ಕುಟುಂಬ ಕಲ್ಯಾಣ ಯೋಜನೆಗಳ ಪ್ರತಿಪಾದನೆ ಹಾಗೂ ಕ್ರಾಂತಿಕಾರಕ 'ಹಿಂದೂ ಕೋಡ್ ಬಿಲ್' ಮೂಲಕ ಆಸ್ತಿ, ವಿವಾಹ ಮತ್ತು ದತ್ತು ಹಕ್ಕುಗಳನ್ನು ಕಲ್ಪಿಸಲು ಅವರು ಪಟ್ಟ ಶ್ರಮವನ್ನು ಕಟ್ಟಿಕೊಡಲಾಗಿದೆ. ಸಂವಿಧಾನದ 14, 15, 16ನೇ ಅನುಚ್ಛೇದಗಳ ಮೂಲಕ ಸಾಂವಿಧಾನಿಕ ಹಕ್ಕುಗಳನ್ನು ನೀಡಿ, ಭಾರತೀಯ ಸ್ತ್ರೀವಾದಿ ಚಿಂತನೆಗೆ ಹಾಗೂ ಮಹಿಳಾ ಸಬಲೀಕರಣಕ್ಕೆ ಅಂಬೇಡ್ಕರ್ ಅವರು ಹಾಕಿಕೊಟ್ಟ ಭದ್ರ ಬುನಾದಿಯನ್ನು ಮರುಮೌಲ್ಯಮಾಪನ ಮಾಡಲಾಗಿದೆ.

**KEYWORDS:** ಡಾ. ಬಿ. ಆರ್. ಅಂಬೇಡ್ಕರ್, ಮಹಿಳಾ ಸಬಲೀಕರಣ, ಹಿಂದೂ ಕೋಡ್ ಬಿಲ್, ಸಂವಿಧಾನಾತ್ಮಕ ಹಕ್ಕುಗಳು, ಸ್ತ್ರೀ ವಿಮೋಚನೆ.

* **ಮಹಾಂತೇಶ ಸೀತಾರಾಮ ಕಾಂಬಳೆ,** ಸಂಶೋಧನಾ ವಿದ್ಯಾರ್ಥಿ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಏಪ್ರಿಲ್ 14, 1891 ರಂದು ಮಧ್ಯಪ್ರದೇಶದ ಮ್ಹೋವ್‌ನಲ್ಲಿ ಜನಿಸಿದರು. ಲಂಡನ್ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡರು. ಇವರು ಕಾನೂನು, ರಾಜಕೀಯ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರಗಳಲ್ಲಿ ವಿದ್ವಾಂಸರಾಗಿದ್ದರು. ಇದಕ್ಕಾಗಿ ಸಮಾಜದಲ್ಲಿ ನಡೆಯುತ್ತಿರುವ ದೌರ್ಜನ್ಯ, ಜಾತೀಯತೆ, ಮೂಢನಂಬಿಕೆ ಮತ್ತು ರಾಜಕೀಯ ಅಧಿಕಾರ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿದರು. ಅಷ್ಟೇ ಅಲ್ಲದೆ ಮಹಿಳಾ ಹಕ್ಕುಗಳ ಪರವಾಗಿ ಹೋರಾಟ ಮಾಡಿದ ಮಹಾನಾಯಕರಾಗಿದ್ದಾರೆ.

ಸ್ವತಂತ್ರ ಭಾರತದಲ್ಲಿ ದಲಿತ ಹಿಂದುಳಿದ ವರ್ಗಗಳ ಹಕ್ಕುಗಳು ಮಾತ್ರವಲ್ಲದೆ ಮಹಿಳಾ ಹಕ್ಕುಗಳಿಗೆ ಆರಂಭಿಕ ಅಡಿಪಾಯವನ್ನು ಹಾಕಿದರು. ಮಹಿಳೆಯರ ಶಿಕ್ಷಣ, ಮತದಾನ, ಮದುವೆಯ ಸ್ವಾತಂತ್ರ್ಯವನ್ನು ಸಾಧಿಸಲು ಸಾಧ್ಯವಾಗುವ ಮಹಿಳೆಯರ ಹಕ್ಕುಗಳನ್ನು ಪ್ರಬಲವಾಗಿ ಪ್ರತಿಪಾದಿಸಿದರು.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಮಹಿಳೆಯರ ಶೋಷಣೆ ನಡೆಯುತ್ತಿರುವುದು ಹಲವಾರು ಸಂಗತಿಗಳಿಂದ ತಿಳಿದು ಬರುತ್ತದೆ. ಅವಳನ್ನು ಸಮಾಜದಲ್ಲಿ ದ್ವಿತೀಯ ದರ್ಜೆಯ ಪ್ರಜೆಯಾಗಿ ನಡೆಸಿಕೊಳ್ಳಲಾಗುತ್ತಿತ್ತು. ಸಮಾಜದಲ್ಲಿ ಅವಳ ಸ್ಥಾನವು ಮನುಷ್ಯರಿಗೆ ಸರಿಸಮಾನವಾಗಿರಲಿಲ್ಲ. ಯಾವುದೇ ಹಕ್ಕು ತನ್ನ ಇಚ್ಛೆಯಂತೆ ನಡೆಯುವುದು ಸಾಧ್ಯವಿರಲಿಲ್ಲ.

ಭಾರತದ ಸಾಮಾಜಿಕ ವ್ಯವಸ್ಥೆಯು ಮಹಿಳೆಯರನ್ನು ಪ್ರಾಣಿ ಮತ್ತು ಆನಂದದ ವಸ್ತುಗಳಂತೆ ಕಂಡಿದೆ. ತುಳಸಿದಾಸ ಬರೆದ ರಾಮಾಯಣದಲ್ಲಿ ಧೋಲ್, ಗನ್ವಾರ್, ಶೂದ್ರ, ಪಶು, ನಾರಿ..ಯೇ ಸಬ್ ತದನ ಕೆ ಅಧಿಕಾರಿ ಎಂದು, ಮನುಸ್ಮೃತಿಯಲ್ಲಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಮತ್ತು ಮಹಿಳೆಯನ್ನು ಹಗಲಿನಲ್ಲಿ ಅಥವಾ ರಾತ್ರಿಯೇ ಆಗಿರಲಿ ಪುರುಷರು ಸದಾ ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು ಎಂಬ ಮಾತುಗಳು ಕಂಡುಬರುವುದರಿಂದ ಹಿಂದೂ ಧರ್ಮಶಾಸ್ತ್ರ ಗ್ರಂಥಗಳು ಮಹಿಳೆಯನ್ನು ತಿರಸ್ಕರಿಸಿದ್ದು ಕಂಡುಬರುತ್ತದೆ.

"ಮನುವಿನ ಪೂರ್ವದಲ್ಲಿ ಸಮಾಜದಲ್ಲಿ ಮಹಿಳೆ ಪುರುಷರಿಗೆ ಸಮಾನ ಅಧಿಕಾರಗಳು ಇದ್ದವು"[1] ಎಂದು ಡಾ. ಬಿ.ಆರ್. ಅಂಬೇಡ್ಕರ್ ಹೇಳುತ್ತಾರೆ. ಆದರೆ ಬುದ್ಧನ ಕಾಲಘಟ್ಟದಲ್ಲಿ ಮಹಿಳೆಗೆ ಉಸಿರಾಡಲು ಅವಕಾಶವಿತ್ತು ಎನ್ನುವುದಕ್ಕೆ ಹಲವಾರು ಮಹಿಳಾ ಹೆಸರುಗಳನ್ನು ಕಾಣಬಹುದು.

ಆಮ್ರಪಾಲಿ, ಗೌತಮಿ, ವಿಶಾಖಾ, ವಿಸಾಲಿ, ರಾಣಿ ಮಲ್ಲಿಕಾ ಮುಂತಾದ ಮಹಿಳೆಯರನ್ನು ಉಲ್ಲೇಖಿಸಿದ್ದಾರೆ. ಇದರಿಂದ ಬುದ್ಧಧರ್ಮ ಮತ್ತು ಧಾರ್ಮಿಕ ತತ್ವಶಾಸ್ತ್ರದ ನೆಲೆಯಲ್ಲಿ ಸಮಾನತೆಯನ್ನು ಕಲ್ಪಿಸಿದ್ದು ಕಂಡುಬರುತ್ತದೆ. ಇದು ಬುದ್ಧನು ಮಹಿಳೆಯರನ್ನು ಸಮನಾಗಿ ಪರಿಗಣಿಸಿದ್ದಕ್ಕೆ ಸಾಕ್ಷಿಯಾಗಿವೆ. ಪಾಶ್ಚಾತ್ಯರ ಶಿಕ್ಷಣ ಹಾಗೂ ಜ್ಯೋತಿಬಾ ಫುಲೆ ಅವರ ಪ್ರಭಾವದಿಂದ ಭಾರತದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುತ್ತಿದ್ದರು.

ಬುದ್ಧನ ಕರುಣೆ, ಮೈತ್ರಿ, ಪ್ರಜ್ಞೆ ಮತ್ತು ಫುಲೆ ದಂಪತಿಗಳ ಶಿಕ್ಷಣದ ಮಹತ್ವ, ಕಬೀರದಾಸರ ಸಮಾನತೆಯ ತತ್ವಗಳು ಡಾ. ಅಂಬೇಡ್ಕರ್ ಅವರ ಮೇಲೆ ಪ್ರಭಾವ ಬೀರಿದವು.

1920ರಲ್ಲಿ ಮಹಿಳೆಯರಿಗೆ ಹೆರಿಗೆ ಯೋಜನೆಗಳ ಪ್ರಾಮುಖ್ಯತೆಯನ್ನು ಕುರಿತು ಮಾತನಾಡಿದ್ದು ಅತಿ ಮಹತ್ವದ್ದಾಗಿದೆ. ಸ್ವತಂತ್ರ ಪೂರ್ವದಲ್ಲಿ ಹೆರಿಗೆಯ ಕಾರಣಕ್ಕಾಗಿ ಅನೇಕ ಮಹಿಳೆಯರು ಮರಣ ಹೊಂದುತ್ತಿದ್ದರು, ಮರಣ ಸಂಖ್ಯೆಯನ್ನು ಕಡಿಮೆ ಮಾಡಲು

ಸರ್ಕಾರದ ಗಮನ ಸೆಳೆದರು.

ಮಹಾಡ್ ಕೆರೆ ಸತ್ಯಾಗ್ರಹದಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ಅಸ್ಪೃಶ್ಯತೆಯು ವಿನಾಶದ ಪ್ರಶ್ನೆ ಪುರುಷರಿಗಿಂತ ಮಹಿಳೆಯರಿಗೆ ಮುಖ್ಯವಾದದ್ದು ಎಂದು ಡಾ. ಅಂಬೇಡ್ಕರ್‌ರವರು ಮಾತನಾಡುತ್ತಾರೆ.

ಅಂಬೇಡ್ಕರ್ ಅವರು ಸ್ತ್ರೀ ಚಿಂತಕರಾಗಿ ಪ್ರತಿ ಹೋರಾಟದಲ್ಲೂ ಸ್ತ್ರೀಯರಿಗೆ ಆದ್ಯತೆ ನೀಡಿದ್ದಾರೆ. ಜಾತೀಯತೆ ಮತ್ತು ಅಸ್ಪೃಶ್ಯತೆಯ ಕರಾಳ ಅನುಭವ ಕಂಡ ಅಂಬೇಡ್ಕರ್‌ರವರು ಅವುಗಳನ್ನು ನಿರ್ಮೂಲನೆ ಮಾಡಬೇಕಾದರೆ ಮಹಿಳಾ ವಿಮೋಚನೆ ಅವಶ್ಯಕವೆಂದು ಅರಿತಿದ್ದರು. ಅದಕ್ಕಾಗಿ ಅಂಬೇಡ್ಕರ್ ಅವರು ಮಹಾಡ್ ಸತ್ಯಾಗ್ರಹ, ನಾಸಿಕ್ ದೇವಾಲಯ ಪ್ರವೇಶ, ಸಂವಿಧಾನಾತ್ಮಕ ಹೋರಾಟ ಮತ್ತು ಹಿಂದೂ ಕೋಡ್ ಬಿಲ್‌ಗಳ ಮೂಲಕ ಮಹಿಳಾ ವಿಮೋಚನೆಗೆ ಕಾರಣರಾದರು.

9 ಮಾರ್ಚ್ 1924ರಲ್ಲಿ ಬಹಿಷ್ಕೃತ ಹಿತಕಾರಿಣಿ ಮಹಾಸಭೆಯ ಸಭೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಮಹತ್ವವನ್ನು ನೀಡುವುದರ ಮೂಲಕ ಮಹಿಳೆಯರ ಪರಿವರ್ತನೆಗಾಗಿ ಕಾರಣರಾದರು.

ಈ ಸಭೆಯಲ್ಲಿ ಎಲ್ಲ ಸ್ತ್ರೀಯರಿಗೆ ಶಿಕ್ಷಣದ ಮಹತ್ವ ತಿಳಿಸಿ ಪ್ರೋತ್ಸಾಹಿಸಿದರು. ಕಂದಾಚಾರ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ ಮತ್ತು ನಾಗರಿಕ ಧಾರ್ಮಿಕ ಆಚರಣೆಗಳ ಕುರಿತು ಜಾಗೃತಿ ಮೂಡಿಸಿದರು.

1927 ಮಾರ್ಚ್ 18 ಮತ್ತು 20ರಲ್ಲಿ ನಡೆದ ಮಹಾಡ್ ಸತ್ಯಾಗ್ರಹದ ಅಧ್ಯಕ್ಷತೆಯನ್ನು ವಹಿಸಿಕೊಂಡು ಅಂಬೇಡ್ಕರ್ ಅವರು ಈ ರೀತಿಯಾಗಿ ಮಾತನಾಡುತ್ತಾರೆ: “ನಿಮ್ಮ ಜನ್ಮವು ಇಲ್ಲಿ ಪಾಪವೆಂದು ತಿಳಿಯಲಾಗಿದೆ. ನೀವು ಅಬಲೆಯರೆಂದು ಪಟ್ಟ ಕಟ್ಟಲಾಗಿದೆ. ಚಳುವಳಿಯಲ್ಲಿ ಭಾಗವಹಿಸುವ ಅಥವಾ ಬಿಡುವ ನಿರ್ಧಾರ ನಿಮ್ಮ ಮೇಲೆ ಇದೆ. ನೀವು ನಮ್ಮೆಲ್ಲರ ತಾಯಿ, ಸಹೋದರಿಯರಾಗಿರುವಿರಿ. ನೀವು ಕೀಳು ಜಾತಿಯವರೆಂಬ ಕಾರಣದಿಂದ ನಿಮಗೆಲ್ಲ ತೊಂದರೆಯಾಗುತ್ತಿದೆ. ಅದಕ್ಕೆ ನಿಮಗೆ ಸಿಟ್ಟು ಬರುವುದಿಲ್ಲವೇಕೆ? ನಮ್ಮ ಉನ್ನತಿಯ ಸಲುವಾಗಿ ನಾವು ಹೋರಾಟ ಮಾಡಲೇಬೇಕಿದೆ. ನಿಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ವಿದ್ಯಾವಂತರನ್ನಾಗಿಸಿ. ನಿಮ್ಮ ಗಂಡ, ಮಗು, ತಂದೆ, ಅಣ್ಣ ಸೆರೆ ಕುಡಿದು ಮನೆಗೆ ಬಂದರೆ ಅವರನ್ನು ಮನೆಯಿಂದ ಹೊರಗೆ ಹಾಕಿ, ಅವರಿಗೆ ಊಟ ನೀಡಬೇಡಿ. ನಿಮ್ಮ ಪರಿಶ್ರಮದಿಂದ ಹೊಸ ಸಂತತಿಯನ್ನು ಹುಟ್ಟು ಹಾಕಿರಿ”.[2] ಈ ಮಾತುಗಳು ದಲಿತ ಮಹಿಳೆಯಲ್ಲಿ ಜಾಗೃತ ಪ್ರಜ್ಞೆ ಹುಟ್ಟು ಹಾಕುವುದರೊಂದಿಗೆ, ಸಾಮಾಜಿಕ ಪರಿವರ್ತನೆಗೆ ಕಾರಣರಾದರು. ನಾಯಿ ನರಿಗಳಿಗಿಂತ ಹೀನಾಯವಾಗಿ ಮನುಷ್ಯನನ್ನು ಕಾಣಲಾಗುತ್ತಿತ್ತು.

ಅಸ್ಪೃಶ್ಯ ಸಮುದಾಯಗಳಿಗೆ ಮಂದಿರ ಪ್ರವೇಶವನ್ನು ನಿರಾಕರಿಸಲಾಗಿತ್ತು. ಇದನ್ನು ವಿರೋಧಿಸಿ 1930ರಲ್ಲಿ ಮಾರ್ಚ್ 3ರಂದು ಕಾಳಾರಾಮ್ ಮಂದಿರ ಪ್ರವೇಶಿಸಿದರು. ಇದರಲ್ಲಿ ಸುಮಾರು 25ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿದೆ.

ಯಾಕೆಂದರೆ ಅಂಬೇಡ್ಕರ್ ಅವರ ಎಲ್ಲ ಹೋರಾಟಗಳಲ್ಲಿ ಮಹಿಳೆಯರು ಕೂಡ ಭಾಗವಹಿಸುತ್ತಿದ್ದರು. ಇದರಿಂದ ಮಹಿಳೆಯರಿಗೂ ಅಂಬೇಡ್ಕರ್ ಎಷ್ಟು ಮಹತ್ವ ನೀಡಿದ್ದಾರೆ ಎಂಬುದು ತಿಳಿದುಬರುತ್ತದೆ.

ಏರುತ್ತಿರುವ ಜನಸಂಖ್ಯೆಯನ್ನು ನೋಡಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್

ನಿಯಂತ್ರಿಸುವ ಹಾಗೂ ಮಕ್ಕಳು ಹೇರುವ ಯಂತ್ರಗಳಾಗಿ ತಮ್ಮ ಆರೋಗ್ಯವನ್ನು ಹದಗೆಡಿಸಿಕೊಳ್ಳುವ ಮಹಿಳೆಯರ ಹಾಗೂ ಕುಟುಂಬದ ಆರೋಗ್ಯದ ರಕ್ಷಣೆಗೆ ಕುಟುಂಬ ಯೋಜನೆ ಅಗತ್ಯವೆಂದು, ದುಡಿಯುವ ಮಹಿಳೆಗೆ ಹೆರಿಗೆ ಭತ್ಯೆ ಮತ್ತು ಆ ಸಮಯದಲ್ಲಿ ರಜೆಗಳನ್ನು ಒದಗಿಸಬೇಕೆಂದು ಮಸೂದೆಯನ್ನು ಮಂಡಿಸಿದರು.

1936ರಲ್ಲಿ ಮುಂಬೈಯ ದೇವದಾಸಿ ಥ್ಯಾಕರೆ ಹಾಲ್‌ನಲ್ಲಿ ಅಂಬೇಡ್ಕರ್ ಅವರು ಮಹಿಳೆಯರನ್ನು ಉದ್ದೇಶಿಸಿ ಹೀಗೆ ಮಾತನಾಡುತ್ತಾರೆ: "ನಿಮ್ಮೊಂದಿಗೆ ನೀವು ನಿಮ್ಮ ಧರ್ಮವನ್ನು ಬದಲಿಸುತ್ತಿರೋ ಇಲ್ಲವೋ ಎಂಬುದು ನನಗೆ ಮುಖ್ಯವಲ್ಲ. ಆದರೆ ನಮ್ಮೆಲ್ಲರೊಂದಿಗೆ ನೀವು ಸೇರಿಕೊಳ್ಳಬೇಕಾದರೆ ಹೀನಾಯವಾದ ಜೀವನವನ್ನು ನೀವು ತ್ಯಜಿಸಬೇಕು. ಕಾಮಾಟಿಪುರ ಮಹಾರ ಮಹಿಳೆಯರು ಸಮುದಾಯದ ನಾಚಿಗೇಡಿನ ಮೂಲ. ನೀವು ನಿಮ್ಮ ಬದುಕಿನ ವಿಧಾನಗಳನ್ನು ಬದಲಿಸಿಕೊಳ್ಳದಿದ್ದರೆ ನಮ್ಮಿಬ್ಬರಿಂದ ಪರಸ್ಪರರಿಗೆ ಏನೂ ಪ್ರಯೋಜನವಾಗದು"[3] ಎಂಬ ಮಾತುಗಳನ್ನು ಹೇಳುತ್ತಾರೆ.

ಮುಂಬೈನ ಕಾಮಾಟಿಪುರ ಪ್ರದೇಶದಲ್ಲಿ ವೇಶ್ಯಾವಾಟಿಕೆ ಹೆಚ್ಚಾಗಿ ನಡೆಯುತ್ತಿದ್ದು, ಇದರಿಂದ ಮುಕ್ತಿ ಹೊಂದಬೇಕೆಂದು ದಲಿತ ಸಮುದಾಯದ ಮಹಿಳೆಯರನ್ನು ಎಚ್ಚರಿಸುತ್ತಾರೆ.

ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಸುಧಾರಿಸದೆ ದೇಶದ ಪ್ರಗತಿ ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಂಡಿದ್ದರು. ಅದಕ್ಕಾಗಿ ಜುಲೈ 20, 1942ರಲ್ಲಿ ನಾಗಪುರ ಸಮಾವೇಶದಲ್ಲಿ ಮಹಿಳೆಯರ ಉನ್ನತಿಗಾಗಿ ಅನುಸರಿಸಬೇಕಾದ ಕೆಲವೊಂದು ಕ್ರಮಗಳ ಬಗ್ಗೆ ಡಾ. ಅಂಬೇಡ್ಕರ್ ಅವರು ಮಾತನಾಡುತ್ತಾರೆ.

ಈ ಸಮಾವೇಶದಲ್ಲಿ ಸುಮಾರು 25000ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದರು. ಶಿಕ್ಷಣದ ಮೂಲಕ ಮಹಿಳೆಯರ ಬದುಕು ಮತ್ತು ಜನಾಂಗದ ಅಭಿವೃದ್ಧಿ ಸಾಧ್ಯವೆಂದು ಹೇಳುತ್ತಾರೆ. ವಿವಾಹವಾಗಲು ಆರ್ಥಿಕ ಮತ್ತು ಸ್ವಾತಂತ್ರ್ಯ ಅವಶ್ಯಕ ಮತ್ತು ಮಹಿಳೆಯರು ಪುರುಷರ ದಾಸ್ಯದಿಂದ ಮುಕ್ತರಾಗಬೇಕೆಂದು ಪ್ರತಿಪಾದಿಸುತ್ತಾರೆ.

1952ರಲ್ಲಿ ಕೊಲ್ಲಾಪುರದಲ್ಲಿ ಮಹಿಳಾ ಸಂಘಟನೆ ಭಾಷಣ ಕಾರ್ಯಕ್ರಮದಲ್ಲಿ ಹಿಂದೂ ಕೋಡ್ ಬಿಲ್ ಉಲ್ಲೇಖಿಸುತ್ತಾ ಮಾತನಾಡಿದರು. "ಭಾರತದ ಯಾವ ಮಹಿಳೆಯರು, ಪ್ರತಿಷ್ಠಿತ ಮಹಿಳಾ ನಾಯಕರು ಮಹಿಳಾ ಸಾಮಾಜಿಕ ಅಭಿವೃದ್ಧಿಗೆ ನಿಜವಾದ ಆಸಕ್ತಿ ತೋರಿಸಲಿಲ್ಲ. ಸದ್ಯ ಈ ಹಿಂದೂ ಕೋಡ್ ಬಿಲ್ ಹುಳಿ ಆಮ್ಲಜನಕದ ಜೊತೆಗೆ ಮಿಶ್ರಣ ಮಾಡಿ ಹಾಲನ್ನು ಕೆಡಿಸುವ ಹಾಗಾಗಿದೆ"[4] ಎಂದು ವಿಷಾದವನ್ನು ವ್ಯಕ್ತಪಡಿಸುತ್ತಾರೆ. ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಸಾಮಾಜಿಕ ಸಮಾನತೆಯನ್ನು ಕಲ್ಪಿಸುವ ಅಂಶಗಳು ಒಳಗೊಂಡಿದ್ದವು.

ಆಸ್ತಿ ಹಕ್ಕಿನ ತಿದ್ದುಪಡಿ, ಆಸ್ತಿಯ ಉತ್ತರಾಧಿಕಾರತ್ವ, ಜೀವನಾಂಶ ಕಾನೂನು, ಮದುವೆಯ ಸ್ವಯಂ ಇಚ್ಛೆ, ವಿವಾಹ ವಿಚ್ಛೇದನೆ ಮತ್ತು ದತ್ತು ಪಡೆಯುವ ಹಕ್ಕುಗಳನ್ನು ಒಳಗೊಂಡಿತ್ತು. ಆದರೆ ಸದನದಲ್ಲಿ ಮಸೂದೆ ಮಂಡನೆಯಾಗದ ಕಾರಣ ಡಾ..

ಅಂಬೇಡ್ಕರ್ ಅವರು ತಮ್ಮ ಕಾನೂನು ಪದವಿಗೆ ರಾಜೀನಾಮೆಯನ್ನು ನೀಡಿ ಹೊರಬಂದರು. ಈ ಮಸೂದೆಯನ್ನು ದೆಹಲಿಯಲ್ಲಿ ಮಹಿಳೆಯರೇ ಹೆಚ್ಚು ವಿರೋಧಿಸಿದ್ದು ವಿಪರ್ಯಾಸದ ಸಂಗತಿಯಾಗಿದೆ.

ನಂತರ ಮುಂದಿನ ದಿನಗಳಲ್ಲಿ ಒಂದೊಂದು ಕಾನೂನುಗಳಾಗಿ ಜಾರಿಗೊಂಡು

ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾದವು. ಇದರಿಂದ ಮಹಿಳೆಯರ ಸ್ಥಾನಮಾನ ಗಟ್ಟಿಯಾಗುತ್ತಾ ಬಂದಿರುವುದನ್ನು ನಾವು ಕಾಣುತ್ತೇವೆ.

**ಸಂವಿಧಾನಾತ್ಮಕ ಹಕ್ಕುಗಳು**

- ಕಲಂ 14: ಕಾನೂನಿನ ಮುಂದೆ ಎಲ್ಲರೂ ಸಮಾನರು.
- ಕಲಂ 15: ಲಿಂಗದ ಆಧಾರದ ಮೇಲೆ ತಾರತಮ್ಯ ನಿಷೇಧ.
- ಕಲಂ 15(3): ಮಹಿಳೆಯರ ಮತ್ತು ಮಕ್ಕಳ ಪರವಾಗಿ ಧನಾತ್ಮಕ ತಾರತಮ್ಯವನ್ನು ಮಾಡಲು ರಾಜ್ಯಕ್ಕೆ ಅಧಿಕಾರವನ್ನು ನೀಡಲಾಗಿದೆ.
- ಕಲಂ 16: ಸಾರ್ವಜನಿಕ ಉದ್ಯೋಗದಲ್ಲಿ ಸಮಾನತೆ.
- ಕಲಂ 23: ಮಾನವರ ಕಳ್ಳಸಾಗಣೆ ಮತ್ತು ಬಲವಂತದ ದುಡಿಮೆ ನಿಷೇಧ.
- ಕಲಂ 29(ಎ) ಮತ್ತು (ಡಿ): ಸಮಾನ ಜೀವನೋಪಾಯ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ.
- ಕಲಂ 51(ಇ): ಮಹಿಳೆಯರ ಘನತೆಗೆ ಅವಹೇಳನಕಾರಿ ಆಚರಣೆಗಳನ್ನು ತ್ಯಜಿಸಲು ಪ್ರತಿಯೊಬ್ಬ ನಾಗರಿಕನ ಮೇಲೆ ಮೂಲಭೂತ ಕರ್ತವ್ಯವನ್ನು ವಿಧಿಸಿದೆ.
- ಕಲಂ 243D(3): ಮಹಿಳೆಯರಿಗೆ ಮೀಸಲಿಡಲು ಪ್ರತಿ ಪಂಚಾಯತನಲ್ಲಿ ನೇರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಒಟ್ಟು ಸ್ಥಾನಗಳ 1/3 ಭಾಗಕ್ಕಿಂತ ಕಡಿಮೆಯಿಲ್ಲ ಮತ್ತು ಅಂತಹ ಸ್ಥಾನಗಳನ್ನು ಪಂಚಾಯತ ವಿವಿಧ ಕ್ಷೇತ್ರಗಳಿಗೆ ಸರದಿ ಮೂಲಕ ಹಂಚಿಕೆ ಮಾಡಬೇಕು.

ಈ ಎಲ್ಲ ಹಕ್ಕುಗಳು ಸ್ತ್ರೀ–ಪುರುಷ ಭೇದವಿಲ್ಲದೆ ಸಮಸ್ತ ಭಾರತೀಯ ನಾಗರಿಕರಿಗೆ ಅನ್ವಯವಾಗುವಂತೆ ಮಾಡಿದರು. ಒಟ್ಟಾರೆಯಾಗಿ ಭಾರತ ಸಾಮಾಜಿಕ ವ್ಯವಸ್ಥೆಯು ಮಹಿಳೆಯನ್ನು ಕೀಳಾಗಿ ನೋಡಲಾಗುತ್ತಿತ್ತು.

ಆದರೆ ಭಾರತದ ಸಂವಿಧಾನ ರಚನೆಯ ನಂತರ ವಿದ್ಯೆ, ಅಧಿಕಾರ, ಆಸ್ತಿ ಮುಂತಾದ ಕ್ಷೇತ್ರದಲ್ಲಿ ಮಹಿಳೆ ಪ್ರಗತಿಯನ್ನು ಕಂಡುಕೊಳ್ಳಲು ಸಾಧ್ಯವಾಯಿತು.

**ಅಡಿ ಟಿಪ್ಪಣಿಗಳು:**

1. ಬಿ. ಗಂಗಾಧರ ಮೂರ್ತಿ, ಭಾರತೀಯ ಭಕ್ತಿ ಪಂಥ ಮತ್ತು ಮಹಿಳೆಯರು, ಅನುಸೂಯ ಕಾಂಬಳೆ (ಸಂ), ವಿಚಾರ ಸಾಹಿತ್ಯ ಮತ್ತು ಹೆಣ್ಣು, ಪು.ಸಂ–52.
2. ಮಂಗಳಾ ಕಾಳೆ, ಸ್ತ್ರೀ ವಿಮೋಚನಾ ಹೋರಾಟಗಳು, ಪು.ಸಂ–82.
3. I. S. Vidyasagar, Concept Of Humanism Of Dr. Ambedkar, p–105.
4. Dr. Dharani Devi Malagatti, Dr. B.R. Ambedkar On Women's Emancipation, p–68.

**ಪರಾಮರ್ಶನ ಗ್ರಂಥಗಳು**

1. ಗೋಪಿನಾಥ ಎಂ, (ಅನುವಾದ) ರಾಮ ಮತ್ತು ಕೃಷ್ಣ ಹಿಂದೂಧರ್ಮದ ಒಗಟುಗಳು, ಮೂಲ ನಿವಾಸಿಗಳ ಮಹಾ ಒಕ್ಕೂಟ ಇಂಡಿಯಾ, ಬೆಂಗಳೂರು, 1995.
2. ಗೋಪಿನಾಥ ಎಂ, ಬುದ್ಧ ಮಾರ್ಗದಿ ನಡೆಯೋಂ ವಿಮೋಚನೆ ಪಡೆಯೋಣ, ದಲಿತ ಸಾಹಿತ್ಯ ಸಂಘಟನೆ, ಬೆಂಗಳೂರು, 1999.
3. ಕುಮಾರಕಕ್ಕಯ್ಯ, ಚಾತುರ್ವರ್ಣಧರ್ಮದರ್ಶನ, ಲೋಹಿಯಾ ಪ್ರಕಾಶನ, ಬಳ್ಳಾರಿ.
4. ಜವರಯ್ಯ ಮ.ನ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.
5. ಮಾಲಗತ್ತಿ ಅರವಿಂದ, ದಲಿತಯುಗ ಮತ್ತು ಕನ್ನಡ ಸಾಹಿತ್ಯ, ಚೇತನ ಬುಕ್ ಹೌಸ್, ಮೈಸೂರು, 1999.
6. ಮಾನೆ ದಯಾನಂದ, ಡಾ.ಅಂಬೇಡ್ಕರ್‌ರ ಹೋರಾಟದ ಪರಿಕಲ್ಪನೆ, ಸಂಕ್ರಮಣ ಪ್ರಕಾಶನ, ಧಾರವಾಡ, 1993.